ವಿಷಯ10 ವಿಭಾಗೀಯ ಕಛೇರಿಗಳನ್ನು ಆರಂಭಿಸುವ ಕುರಿತು.

ಟಿಪ್ಪಣಿ: ಬೆಳಗಾವಿ ವಿಭಾಗದಲ್ಲಿ 2010ರಲ್ಲಿ ವಿಭಾಗೀಯ ಕಛೇರಿಯನ್ನು ಆರಂಭಿಸಲಾಗಿದೆ. ಮತ್ತು 2011ರಲ್ಲಿ ಗುಲ್ಬರ್ಗಾ ವಿಭಾಗದಲ್ಲಿ ಮೂವರು ಸಿಬ್ಬಂದಿಗಳನ್ನು ನಿಯೋಜಿಸಿ ವಿಭಾಗೀಯ ಕಛೇರಿಯನ್ನು ಪ್ರಾಯೋಗಿಕವಾಗಿ ಆರಂಭಿಸಲಾಗಿದೆ. ವರ್ಷದಿಂದ ವರ್ಷಕ್ಕೆ ಸೌಹಾರ್ದ ಸಹಕಾರಿಗಳ ಸಂಖ್ಯೆ ಹೆಚ್ಚುತ್ತಿದೆ. ಎಲ್ಲಾ ಚಟುವಟಿಕೆಗಳನ್ನು ಒಂದೇ ಸ್ಥಳದಿಂದ ನಿಯಂತ್ರಣ ಮಾಡುವುದು ಕಷ್ಟಸಾಧ್ಯ. ಅಲ್ಲದೇ ಎಲ್ಲಾ ವಿಭಾಗಗಳಲ್ಲಿ ವಿಭಾಗೀಯ ಕಛೇರಿಗಳನ್ನು ಆರಂಭಿಸಿದಲ್ಲಿ ಕೆಲಸದ ಹಂಚಿಕೆಯ ಜೊತೆ ಸಹಕಾರಿಗಳ ಜೊತೆ ಉತ್ತಮ ಸಂವಹನ ಸಾಧ್ಯ. ಈ ಹಿನ್ನೆಲೆಯಲ್ಲಿ ಇನ್ನುಳಿದ ವಿಭಾಗಗಳಲ್ಲಿಯೂ ಕೂಡ ವಿಭಾಗೀಯ ಕಛೇರಿಗಳನ್ನು ಆರಂಭಿಸುವ ಕುರಿತು ಚರ್ಚಿಸಿ ನಿರ್ಣಯಿಸಬಹುದಾಗಿದೆ. ಮಾಹಿತಿಗಾಗಿ ಬೆಳಗಾವಿ ಮತ್ತು ಗುಲ್ಬರ್ಗಾ ವಿಭಾಗಗಳ ವರದಿಯನ್ನು ಈ ನೋಟಿಸಿನೊಂದಿಗೆ (ಪುಟ ಸಂಖ್ಯೆ 38) ನೀಡಿದೆ.

ವಿಷಯ11 ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಕುರಿತು.

ಟಿಪ್ಪಣಿ: ಸಂಯುಕ್ತ ಸಹಕಾರಿಯ ಕಛೇರಿ ಬದಲಾವಣೆ ಕುರಿತ ಉಪವಿಧಿ ತಿದ್ದುಪಡಿಯ ಕರಡನ್ನು (ಪುಟ ಸಂಖ್ಯೆ 41) ಈ ನೋಟೀಸಿನೊಂದಿಗೆ ನೀಡಲಾಗಿದೆ. ಅದನ್ನು ಅನುಮೋದಿಸಬಹುದಾಗಿದೆ.

ವಿಷಯ12 ಸಮೂಹ ಸಂಸ್ಥೆಗಳಿಗೆ ಸಂಬಂಧಿಸಿ ಸುತ್ತೋಲೆ ನೀಡುವ ಕುರಿತು.

ಟಿಪ್ಪಣಿ: ಕೆಲವು ಸೌಹಾರ್ದ ಸಹಕಾರಿಗಳು ಸಹಕಾರಿಯ ಹೆಸರಿನ ವಿವಿಧ ಸಂಸ್ಥೆಗಳು ಸೇರಿಕೊಂಡು ಸಮೂಹ ಸಂಸ್ಥೆಗಳು ಎಂದು ಪ್ರಚಾರ ಮಾಡುತ್ತಿವೆ. ಈ ರೀತಿ ಸಮೂಹ ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಇತರೆ ಸಂಸ್ಥೆಗಳಲ್ಲಿನ ವ್ಯವಹಾರವು ಸೌಹಾರ್ದ ಸಹಕಾರಿಯ ಮೇಲೂ ಆಗುತ್ತಿದೆ. ಇದೇ ಕಾರಣದಿಂದಲೇ ಕೆಲವು ಸಹಕಾರಿಗಳು ತೊಂದರೆ ಅನುಭವಿಸಿವೆ. ಮತ್ತು ಸೌಹಾರ್ದ ಚಳುವಳಿಯ ಕುರಿತು ಕೂಡ ಜನರಿಗೆ ತಪ್ಪು ಸಂದೇಶ ರವಾನೆಯಾಗುತ್ತಿದೆ. ಸೌಹಾರ್ದ ಸಹಕಾರ ಕಾಯ್ದೆಯಡಿ ನೋಂದಾಯಿತವಾದ ಕೆಲವು ಸಹಕಾರಿಗಳ ಅಧಿಕೃತ ಕಟ್ಟಡದಲ್ಲಿ ಅದೇ ಹೆಸರಿನ ಅಥವಾ ಬೇರೆ ಹೆಸರಿನ ವಿವಿಧ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿದೆ. ಇದು ಸಹಕಾರಿಯು ನಡೆಸುತ್ತಿರುವ ಚಟುವಟಿಕೆಗಳ ಮೇಲೆ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದೆಂದು ಸಂಯುಕ್ತ ಸಹಕಾರಿಯು ಅಭಿಪ್ರಾಯ ಪಟ್ಟಿದೆ. ಈ ಹಿನ್ನೆಲೆಯಲ್ಲಿ ದಿನಾಂಕ 25 ಜುಲೈ 2005 ರಂದು ಸಂಯುಕ್ತ ಸಹಕಾರಿಯು ಒಂದು ಸುತ್ತೋಲೆ ನೀಡಿತ್ತು. ಆದರೂ ಕೆಲವು ಸಹಕಾರಿಗಳ ಅಧಿಕೃತ ಕಛೇರಿಯಲ್ಲಿ ಇತರೆ ಸಂಸ್ಥೆಗಳೂ ಕೂಡ ಕಾರ್ಯ ನಿರ್ವಹಿಸುತ್ತಿರುವುದು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಆಡಳಿತ ಮಂಡಳಿಯು ದಿನಾಂಕ 02.06.2012ರ ಸಭೆಯಲ್ಲಿ ಸಮೂಹ ಸಂಸ್ಥೆಗಳ ಕುರಿತು ಕರಡು ಸುತ್ತೋಲೆಯನ್ನು ರಚಿಸಿದ್ದು ಅದನ್ನು ಈ ನೋಟೀಸಿನೊಂದಿಗೆ (ಪುಟ ಸಂಖ್ಯೆ 43) ನೀಡಲಾಗಿದೆ. ಈ ಕುರಿತು ಚರ್ಚಿಸಿ ಸೂಕ್ತವಾಗಿ ನಿರ್ಣಯಿಸಬಹುದಾಗಿದೆ.

ವಿಷಯ13 ನೂತನವಾಗಿ ಸೇರ್ಪಡೆಗೊಂಡ ಸದಸ್ಯ ಸಹಕಾರಿಗಳ ಕುರಿತು.

ಟಿಪ್ಪಣಿ: 2011–12ನೇ ಸಾಲಿನಲ್ಲಿ ನೂತನವಾಗಿ ಸಂಯುಕ್ತ ಸಹಕಾರಿಯ ಸದಸ್ಯರಾದ ಸಹಕಾರಿಗಳ ಕೋಷ್ಟಕ(ಪುಟ ಸಂಖ್ಯೆ 44) ವನ್ನು ಮಾಹಿತಿಗಾಗಿ ನೀಡಿದೆ.

ವಿಷಯ14 ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು.

ಟಿಪ್ಪಣಿ: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಯಾವುದೇ ವಿಷಯವನ್ನು ಚರ್ಚಿಸಲು ಇಚ್ಛಿಸುವವರು 22 ಆಗಸ್ಟ್ 2012ರೊಳಗೆ ಲಿಖಿತವಾಗಿ ಸಂಯುಕ್ತ ಸಹಕಾರಿಯ ಕಛೇರಿಗೆ ವಿಷಯದ ವಿವರ ಸಹಿತ ಕೋರಿಕೆ ಸಲ್ಲಿಸತಕ್ಕದ್ದೆಂದು ನೋಟೀಸಿನಲ್ಲಿ ಸೂಚಿಸಲಾಗಿದೆ. ಅದರಂತೆ ಯಾರಾದರೂ ಕೋರಿಕೆ ಸಲ್ಲಿಸಿದಲ್ಲಿ ಸಾಮಾನ್ಯ ಸಭೆಯ ವೇಳೆಗೆ ಪ್ರತ್ಯೇಕವಾದ ಟಿಪ್ಪಣಿ ನೀಡಲಾಗುವುದು.

# 2011-12 ಸಾಲಿನ ವಾರ್ಷಿಕ ವರದಿ






ಅಂತರರಾಷ್ಟ್ರೀಯ ಸಹಕಾರಿ ವರ್ಷದ ಆಚರಣೆಯ ಸಂದರ್ಭದಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 11ನೇ ಸಾಮಾನ್ಯ ಸಭೆಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಲು ಸಂತೋಷವಾಗುತ್ತಿದೆ. ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿ ದಿನದಿಂದ ದಿನಕ್ಕೆ ಸಾರ್ವಜನಿಕರ, ಸಹಕಾರಿ ಗಣ್ಯರ, ಸರ್ಕಾರದ ವಿಶ್ವಾಸಕ್ಕೆ ಪಾತ್ರವಾಗುತ್ತಿರುವುದು ತಮ್ಮೆಲ್ಲರಿಗೆ ತಿಳಿದ ವಿಷಯವಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಹೆಚ್ಚುತ್ತಿರುವುದು ನಮಗೆಲ್ಲ ಅತ್ಯಂತ ಸಂತೋಷದ ವಿಷಯ. ಈ ಪ್ರಗತಿಗೆ ಕಾರಣರಾದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಅಭಿನಂದನೆಗಳು.

ಮಾನ್ಯ ಸಹಕಾರಿ ಬಂಧುಗಳೇ, ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಂಯುಕ್ತ ಸಹಕಾರಿಯು ನೇತೃತ್ವವಹಿಸಿಕೊಂಡಿದ್ದು, ಈ ಚಳುವಳಿಯ ಅಭಿವೃದ್ಧಿಗಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿ, ಈ ಕ್ಷೇತ್ರದ ಸಮಸ್ಯೆ ಹಾಗೂ ಅಭಿವೃದ್ಧಿಯ ಬಗ್ಗೆ ಚಿಂತನೆ ನಡೆಸುತ್ತಲೇ ಇದ್ದೇವೆ. ಈ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಜನ ಸಾಮಾನ್ಯರ ಒಲವು ಮೂಡಿಸಿ, ಅವರಲ್ಲಿ ಸಕಾರಾತ್ಮಕ ಮನೋಬಾವದ ಬೆಳವಣಿಗೆಗೆ ಪೂರಕವಾದ ಪರಿಣಾಮಕಾರಿ ಪ್ರಚಾರ ಕೈಗೊಳ್ಳಲಾಗುತ್ತಿದೆ. ಸದಸ್ಯ ಸಹಕಾರಿಗಳ ಜೊತೆ ನಿರಂತರ ಸಂಪರ್ಕ ಹಾಗೂ ಸಮಸ್ಯೆಗಳಿಗೆ ಸ್ಪಂದಿಸುವ ವ್ಯವಸ್ಥೆ ಮಾಡಲಾಗಿದೆ. ಗುಣಾತ್ಮಕ ತರಬೇತಿ ಕಾರ್ಯಾಗಾರಗಳನ್ನು ಸಂಘಟಿಸಲಾಗುತ್ತಿದೆ. ರಾಜ್ಯದ ಸಹಕಾರಿ ಚಳುವಳಿಯ ಮುಖ್ಯ ವಾಹಿನಿಯಲ್ಲಿ ಪ್ರಗತಿ ಪಥದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಗುರುತಿಸಿಕೊಂಡಿದೆ ಎಂಬುದನ್ನು ಹೆಮ್ಮೆಯಿಂದ ತಮಗೆ ತಿಳಿಸಲು ಸಂತೋಷವಾಗುತ್ತಿದೆ.


ಪ್ರಸಕ್ತ ಸಾಲಿನ ಆಡಳಿತ ವರದಿಯಲ್ಲಿ ಸಂಯುಕ್ತ ಸಹಕಾರಿಯ ಚಟುವಟಿಕೆಗಳ ಪೂರ್ಣ ಮಾಹಿತಿ ನೀಡಲಾಗಿದೆ. ತಾವು ಈ ವರದಿಯನ್ನು ಅಧ್ಯಯನ ಮಾಡಿ, ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಸಂಯುಕ್ತ ಸಹಕಾರಿಗೆ ಸೂಕ್ತ ಸಲಹೆ, ಅಭಿಪ್ರಾಯ/ಅನಿಸಿಕೆ, ಮಾರ್ಗದರ್ಶನ ನೀಡಬೇಕೆಂದು ವಿನಂತಿಸುತ್ತಾ, ಈ ವಾರ್ಷಿಕ ವರದಿಯನ್ನು ತಮ್ಮ ಮುಂದಿಡುತ್ತಿದ್ದೇನೆ.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

## ರಾಜ್ಯದ ಸೌಹಾರ್ದ ಸಹಕಾರ ಕ್ಷೇತ್ರದ ಪ್ರಗತಿ

**ಆರ್ಥಿಕ ವಿವರಗಳು :** 31-03-2012ರಲ್ಲಿದ್ದಂತೆ ಸಹಕಾರಿಗಳ ಸಂಖ್ಯೆ: 2008 (ಈ ಕೆಳಗಿನ ಅಂಕಿ-ಅಂಶಗಳು ಅಂದಾಜು ಅಂಕಿ-ಅಂಶಗಳಾಗಿರುತ್ತವೆ)


| | |
|---|---|
| ಬಂಡವಾಳ | ₹ 315 ಕೋಟಿ |
| ಠೇವಣಿ | ₹ 6000 ಕೋಟಿಗಳು |
| ಸಾಲಗಳು | ₹ 4600 ಕೋಟಿಗಳು |
| ಕಾಯ್ದಿಟ ನಿಧಿಗಳು | ₹ 525 ಕೋಟಿಗಳು |
| ದುಡಿಯುವ ಬಂಡವಾಳ | ₹ 7000 ಕೋಟಿಗಳು |
| ಲಾಭ | ₹ 100 ಕೋಟಿಗಳು |
| ಸದಸ್ಯರ ಸಂಖ್ಯೆ | 14.5 ಲಕ್ಷ |
| ನೇರವಾಗಿ ಉದ್ಯೋಗದಲ್ಲಿರುವವರು | 15000 |
| ಪೂರಕ ಉದ್ಯೋಗದಲ್ಲಿರುವವರು | 13500 |



## 5 ವರ್ಷಗಳ ಸಹಕಾರಿಗಳ ಮಾಹಿತಿ

| ಕ್ರ.ಸಂ. | ವರ್ಷ | ಬ್ಯಾಂಕ್ | ಕ್ರೆಡಿಟ್ | ಇತರೆ | ಒಟ್ಟು |
|---|---|---|---|---|---|
| 1. | ಮಾರ್ಚ್-08 | 19 | 574 | 364 | 957 |
| 2. | ಮಾರ್ಚ್-09 | 19 | 692 | 419 | 1130 |
| 3. | ಮಾರ್ಚ್-10 | 19 | 826 | 502 | 1347 |
| 4. | ಮಾರ್ಚ್-11 | 19 | 988 | 647 | 1654 |
| 5. | ಮಾರ್ಚ್-12 | 18 | 1165 | 825 | 2008 |

## ಜಿಲ್ಲಾವಾರು ಸಹಕಾರಿಗಳ ವಿವರ :




### ಆಡಳಿತ ಚಟುವಟಿಕೆಗಳು

**ಸೌಹಾರ್ದ ಸಹಕಾರಿ ದಿನ :**

ಜನವರಿ 1, 2001 ರಂದು ಸೌಹಾರ್ದ ಕಾಯ್ದೆ ಜಾರಿಗೆ ಬಂದ ಹಿನ್ನೆಲೆಯಲ್ಲಿ ಆ ದಿನವನ್ನು ಪ್ರತಿವರ್ಷದಂತೆ ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಲಾಯಿತು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಛೇರಿಯಲ್ಲಿ ಸಹಕಾರ ಧ್ವಜಾರೋಹಣ ಮಾಡಿ ಸೌಹಾರ್ದ ಸಹಕಾರಿ ದಿನವನ್ನು ಆಚರಿಸಲಾಯಿತು. ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗಳಲ್ಲಿ, ರಾಜ್ಯದ 225ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನವನ್ನು ಆಚರಿಸಲಾಯಿತು.

**ಆಡಳಿತ ಮಂಡಳಿ ಮತ್ತು ಉಪ ಸಮಿತಿ ಸಭೆಗಳು :**

ಸಂಯುಕ್ತ ಸಹಕಾರಿಯು 2011-2012ನೇ ಸಾಲಿನಲ್ಲಿ ಒಟ್ಟು 6 ಆಡಳಿತ ಮಂಡಳಿ ಸಭೆಗಳನ್ನು ಸಭೆಗಳನ್ನು ಮತ್ತು 5 ಉಪ ಸಮಿತಿ ಸಭೆಗಳಯನ್ನು ನಡೆಸಲಾಗಿದೆ. ಅಲ್ಲದೇ ಸಂಯುಕ್ತ ಸಹಕಾರಿಯ ನಿರ್ದೇಶಕರ ವಿಭಾಗವಾರು ಉಪ ಸಮಿತಿ ಸಭೆಗಳನ್ನು ಪ್ರತಿ ಎರಡು ತಿಂಗಳಿಗೊಮ್ಮೆ ನಡೆಸಿದ್ದು, ಸಂಯುಕ್ತ ಸಹಕಾರಿಯ ಪ್ರಗತಿ ಪರಿಶೀಲನೆ, ಕಾರ್ಯಚಟುವಟಿಕೆಗಳಿಗೆ ಮಾರ್ಗದರ್ಶನ ಪಡೆಯಲಾಗಿದೆ. ಮತ್ತು ಸಂಯುಕ್ತ ಸಹಕಾರಿ ನಿರ್ದೇಶಕರಿಗೆ ಬೆಂಗಳೂರಿನಲ್ಲಿ ಸಹಕಾರಿ ಕ್ಷೇತ್ರದಲ್ಲಿ ನಾಯಕತ್ವದ ಕುರಿತು ತರಬೇತಿ ನಡೆಸಲಾಗಿದೆ. ಇದರಲ್ಲಿ ಸಂಯುಕ್ತ ಸಹಕಾರಿಯ 28 ನಿರ್ದೇಶಕರು ಭಾಗವಹಿಸಿರುತ್ತಾರೆ.

**ಇ-ಸ್ಟಾಂಪಿಂಗ್ ವ್ಯವಹಾರ :**

ಸೌಹಾರ್ದ ಸದಸ್ಯ ಸಹಕಾರಿಗಳಿಗೆ ಹೆಚ್ಚಿನ ವ್ಯವಹಾರ ಅವಕಾಶವನ್ನು ಒದಗಿಸುವ ಉದ್ದೇಶದಿಂದ ಸಂಯುಕ್ತ ಸಹಕಾರಿಯು ತನ್ನ ಸದಸ್ಯ ಸಹಕಾರಿಗಳ ಪರವಾಗಿ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್

## Karnataka State Souharda Federal Cooperative Ltd., Bangalore
## Co-operatives registered under Karnataka Souharda Sahakari Act 1997 in the year 2011-12

| Sl. No. | District | Credit | Thrift | Employees | Education | Multipurpose | Industry | Agriculture | Okkuta | Others | Total | New | Converted |
|---|---|---|---|---|---|---|---|---|---|---|---|---|---|
| 1 | Bidar | 10 | | | | 2 | | | | | 12 | 12 | |
| 2 | Gulbarga | 16 | | | | 1 | | 4 | | | 21 | 21 | |
| 3 | Yadagiri | 4 | | | | 1 | | | | | 5 | 5 | |
| 4 | Bellary | 5 | | | | 17 | | | | | 22 | 22 | |
| 5 | Raichur | 6 | 1 | | | 4 | | 1 | | | 12 | 12 | |
| 6 | Koppala | 4 | | | | 7 | | | | | 11 | 11 | |
| 7 | Bijapur | 15 | | | | 10 | | 4 | | | 29 | 29 | |
| 8 | Bagalkot | 17 | | | | 2 | | 4 | | | 23 | 23 | |
| 9 | Belgaum | 30 | | | | 50 | | | | 1 | 81 | 66 | 15 |
| 10 | Dharwad | 1 | | | | 1 | | 2 | | | 4 | 4 | |
| 11 | Gadag | 1 | | | | 2 | | | | | 3 | 3 | |
| 12 | Haveri | 1 | | | | 5 | | 1 | | | 7 | 6 | 1 |
| 13 | North Canara | 4 | | | | 1 | | 2 | | | 7 | 6 | 1 |
| 14 | Shimoga | 3 | | | | 5 | | 1 | | | 9 | 8 | 1 |
| 15 | Chitradurga | 3 | | | | | | | | | 3 | 3 | |
| 16 | Davanagere | 2 | | | | 3 | | | | | 5 | 5 | |
| 17 | Chickmaglur | 2 | | | | 2 | | | | | 4 | 4 | |
| 18 | South Canara | 4 | 1 | | | 3 | | | | | 8 | 8 | |
| 19 | Udupi | 3 | | | | 10 | | | | | 13 | 13 | |
| 20 | Kodagu | 1 | | | | | | | | | 1 | 1 | |
| 21 | Mysore | 2 | | | | 2 | | 1 | | | 5 | 5 | |
| 22 | Chamarajanagar | | | | | 2 | | | | | 2 | 2 | |
| 23 | Hassan | 2 | | | | 5 | | | | | 7 | 7 | |
| 24 | Tumkur | 16 | | 1 | | 2 | | | | | 19 | 19 | |
| 25 | Kolar | | | | | 3 | | | | | 3 | 3 | |
| 26 | Chikkaballapur | 1 | | | | 1 | | | | | 2 | 2 | |
| 27 | Ramanagar | | | | | | | 1 | | | 1 | 1 | |
| 28 | Bangalore Rural | 2 | | | | 1 | | | | | 3 | 3 | |
| 29 | Bangalore | 19 | | 2 | 1 | 8 | | 1 | 1 | | 32 | 32 | |
| | **Total** | **174** | **2** | **3** | **1** | **150** | **0** | **22** | **1** | **1** | **354** | **336** | **18** |